International Journal of Kannada Research 2017; 3(4): 151-154

International Journal of Kannada Research
www.kannadajournal.com

**ISSN: 2454–5813**
IJKR 2017; 3(4): 151-154
© 2017 IJKR
www.kannadajournal.com
Received: 24-08-2017
Accepted: 25-09-2017

**ಶ್ರೀ ವಾಯ್.ಎ. ಜಕ್ಕಣ್ಣವರ**
ಕನ್ನಡ ವಿಭಾಗದ ಮುಖ್ಯಸ್ಥರು
ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ
ಮಹಾವಿದ್ಯಾಲಯ ಬೆಳಗಾವಿ

**ರಾಣಿ ಚನ್ನಮ್ಮ ವಿ.ವಿ.**
ಕನ್ನಡ ವಿಭಾಗದ ಮುಖ್ಯಸ್ಥರು
ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ
ಮಹಾವಿದ್ಯಾಲಯ ಬೆಳಗಾವಿ

**ಡಾ.ಕೆ.ಆರ್.ಸಿದ್ದಗಂಗಮ್ಮ**
ಕನ್ನಡ ವಿಭಾಗದ ಮುಖ್ಯಸ್ಥರು
ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ
ಮಹಾವಿದ್ಯಾಲಯ ಬೆಳಗಾವಿ

**Correspondence**
**ಶ್ರೀ ವಾಯ್.ಎ. ಜಕ್ಕಣ್ಣವರ**
ಕನ್ನಡ ವಿಭಾಗದ ಮುಖ್ಯಸ್ಥರು
ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ
ಮಹಾವಿದ್ಯಾಲಯ ಬೆಳಗಾವಿ

# ಶ್ರೀ ಸಿದ್ಧರಾಮೇಶ್ವರರ ೧೪೫ ನೇ ಜಯಂತಿ ಉತ್ಸದ ನಿಮಿತ್ಯ ಶ್ರೀ ಕ್ಷೇತ್ರ ಉಳವಿಯಲ್ಲಿ ದಿನಾಂಕ ೧೪/೦೧/೨೦೧೭ ರಂದು ಆಯೋಜಿಸಿದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ ಸೊನ್ನಲಿಗೆ ಸಿದ್ದರಾಮನ ಕರ್ಮಯೋಗ ಮತ್ತು ಜ್ಞಾನ ಯೋಗ

**ಶ್ರೀ ವಾಯ್.ಎ. ಜಕ್ಕಣ್ಣವರ, ರಾಣಿ ಚನ್ನಮ್ಮ ವಿ.ವಿ., ಡಾ.ಕೆ.ಆರ್.ಸಿದ್ದಗಂಗಮ್ಮ**

೧೨ ನೇ ಶತಮಾನದ ವಚನ ಚಳುವಳಿಯ ಪ್ರಮುಖ ವಚನಕಾರ ಸಿದ್ದರಾಮನು ಕಾಯಕ ನಿಷ್ಠನಾಗಿ ಸಾಮಾಜಿಕ ಕಾರ್ಯಗಳನ್ನು ಮಾಡುತ್ತ ಸೊನ್ನಲಿಗೆಯನ್ನು ತನ್ನ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು ಕಾಯಕಯೋಗಿಯಾಗಿ ಸೊನ್ನಲಿಗೆಯನ್ನು ಭೂಕೈಲಾಸವಾಗಿ ಮಾರ್ಪಡಿಸಿದನು ಸಿದ್ದರಾಮ ಮುದ್ದುಗೌಡ ಸುಗ್ಗವೆಯರ ಮಗನಾಗಿ ಜನಿಸುವ ಮೊದಲು ರೇವಣಸಿದ್ದೇಶ್ವರರು ಸೊನ್ನಲಿಗೆ ಬಂದು ಪಲ್ಲಕ್ಕಿಯಿಂದ ಇಳಿದು ಕಾಲು ನಡಿಗೆಯಿಂದ ಮುದ್ದುಗೌಡ–ಸುಗ್ಗವ್ವೆಯರ ಮನೆಗೆ ಹೊರಟಾಗ ಶಿಷ್ಯರು ಆಶ್ಚರ್ಯದಿಂದ ಕೇಳಿದಾಗ ಈ ಗ್ರಾಮದಲ್ಲಿ ಯೋಗಿಯೊಬ್ಬನ ಜನನವಾಗುತ್ತದೆ. ಎಂದು ಹೇಳಿದರು ಹೀಗೆ ಸಿದ್ದರಾಮನ ಜನನವೇ ಬಂದು ಪವಾಡ ! ರೂಪ ರಾಘವಾಂಕ ತನ್ನ 'ಸಿದ್ದರಾಮ ಚರಿತ್ರ' ಕಾವ್ಯದಲ್ಲಿ ಬಿಂಬಿಸಿದ್ದಾನೆ.
ಸಿದ್ದರಾಮ ಬಾಲಕನಾಗಿದ್ದಾಗಲೇ ಧೂಳಿಮಾಕಾಳನೆಂಬ ದನ ಕಾಯುವ ಹುಡುಗ ಮುಗ್ಧಭಕ್ತಿಯಿಂದ ಶಿವಭಕ್ತನಾಗಿ ಮಾಡಿದ ತಪಸ್ಸು ಫಲಿಸಿ ಶಿವ ಮಲ್ಲಯ್ಯನೆಂಬ ಜಂಗಮನ ರೂಪದಲ್ಲಿ ಬಂದು ದರ್ಶನವಿತ್ತು. ಮಾಯವಾದಾಗ ಹಠಹಿಡಿದ ಬಾಲಕ ಸಿದ್ದರಾಮ ಚನ್ನಮಲ್ಲಿಕಾರ್ಜುನನ್ನು ಅರಸುತ್ತ ಶ್ರೀ ಶೈಲಕ್ಕೆ ಬಂದು ಶಿವ ಸಾಕ್ಷಾತ್ಕಾರಕ್ಕಾಗಿ ಹಠ ಹಿಡಿದು ಎತ್ತರದ ಬೆಟ್ಟ (ಶೈಲ) ದಿಂದ ಬಿದ್ದು ಪ್ರಾಣಬಿಡುವದಾಗಿ ನಿರ್ಧರಿಸಿದಾಗ ಶಿವ ಪ್ರತ್ಯಕ್ಷನಾಗಿ ತಾನಿರುವ ತಾನಕ್ಕೆ ನಾನು ಬರುವದಾಗಿ ಮಲ್ಲಿಕಾರ್ಜುನ ಮಾತು ಕೊಟ್ಟು ಬಾಲಕ ಸಿದ್ದರಾಮನನ್ನು ಕಳುಹಿಸಿಕೊಡುತ್ತಾನೆ. ಹೀಗೆ ಸೊನ್ನಲಿಗೆಯಲ್ಲಿ ಕಪಿಲ ಸಿದ್ದ ಮಲ್ಲಿಕಾರ್ಜುನ ಲಿಂಗವನ್ನು ಸ್ಥಾಪಿಸಿ ದೇವಾಲಯ ನಿರ್ಮಾಣ ಮಾಡಿ ಲಿಂಗಾಭಿಷೇಕ, ಯೋಗಮಜ್ಜನ, ಅಭಿಷೇಕ, ನೈವೇದ್ಯ ಸಮರ್ಪಣೆ, ದಾನ ವಿಯೋಗ, ಉತ್ಸವ, ಹೋಮ–ಹವನಗಳನ್ನು ಮಾಡುತ್ತ ಲೋಕೋಪಕಾರವ ಮಾಡುತ್ತ ಸೊನ್ನಲಿಗೆಯನ್ನು ಭೂ ಕೈಲಾಸವಾಗಿಸಿ.

> "ಕೈಯಲ್ಲಿ ಹಿಡಿದು ಕಾಬುದು ಕರ್ಮಪೂಜೆಯಲ್ಲಿವೆ?
> ಮನದಲ್ಲಿ ನೆನೆದು ಮಾಡುವುದೆಲ್ಲವು ಕಾಯದ ಕರ್ಮವಲ್ಲದೇ?
> ಭಾವಶುದ್ದವನರಿದ ಪರಿ ಇನ್ನಾವುದು?
> ಕಪಿಲಸಿದ್ದ ಮಲ್ಲಿಕಾರ್ಜುನಾ........ ಎಂದು

"ಕೆರೆಬಾವಿ ಹೂ ದೋಟ ಚೌಕ ಛತ್ರಂಗಳ ಮಾಡಿ । ಜೀವಂಗಳ ಮೇಲೆ ಕೃಪೆಯುಂಟೆಂದು ಎನ್ನದಾನಿ, ಎಂಬರು/ಆನು ದಾನಿಯಲ್ಲವಯ್ಯಾ ನೀ ಹೇಳಿದಂತೆ ನಾ ಮಾಡಿದೇನು/ನೀ ಬರ ಹೇಳಿದಲ್ಲಿ ಬಂದೇನು ನೀ ಇರಿಸಿದಂತೆ ಇದ್ದೇನು/ನಿನ್ನ ಇಚ್ಛಾಮಾತ್ರವ ಮೀರಿದೆನಾಯಿತ್ತಾದಡೆ ಫಲಪದ ಜನನವ ಬಯಸಿದಡೆ ನಿಮ್ಮಾಣೆ/ಎಂದು ಕೆರೆ, ತೊರೆ, ಬಾವಿಗಳೆಲ್ಲವೂ ಮಂಗಳ ಸ್ವರೂಪಿಯಾದ ಪರಬ್ರಹ್ಮವೇ ಆಗಿವೆ ಎಂದು ತಿಳಿದು ಸೊನ್ನಲಿಗೆಯಲ್ಲಿ ಬದುಕಿದ್ದು ವಿಶೇಷವಾಗಿದೆ.

ಸಿದ್ದರಾಮನ ಬದುಕಿನಲ್ಲಿ ನಾವು ಎರಡು ಮಹತ್ತರವಾದ ಘಟ್ಟಗಳನ್ನು ಕಾಣಬಹುದು * ಜನ ಸಾಮಾನ್ಯರೊಂದಿಗೆ ಬೆರೆತು ಲೋಕ ಕಲ್ಯಾಣವನ್ನೇ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಲೋಕ ಕಲ್ಯಾಣವನ್ನೇ ಉಸಿರಾಗಿಸಿಕೊಂಡು ಸೊನ್ನಲಿಗೆಯಲ್ಲಿ ಬದುಕಿದ್ದು ಮೊದಲನೇಯ ಹಂತ * ಅಲ್ಲಪ್ರಭು ಸಿದ್ದರಾಮನ ಸಾಧನೆ ಕೇಳಿ ಬೆರಗಾಗಿ ಆತನನ್ನು ಕರ್ಮಯೋಗದಿಂದ ಬಿಡಿಸಿ ಶಿವಯೋಗದಲ್ಲಿ ನೆಲೆನಿಲ್ಲುವಂತೆ ಮಾಡುವ ಉದ್ದೇಶದಿಂದ ಅನುಭವ ಮಂಟಪಕ್ಕೆ ಕರೆ ತಂದು ಶರಣರ ಸಂಗದಲ್ಲಿ ನೆಲೆಸುವಂತೆ ಮಾಡಿದ್ದು ಎರಡನೇಯ ಹಂತ.

> "ಕೆರೆ ತೊರೆ ದೇಗುಲಗಳ ಕಡೆಯಿಂದ ನಿಮ್ಮ ಕಡೆ
> ಎಡವುದ ಕಲ್ಲ ತೆಗೆವ ಮರೆಯಲ್ಲಿ ನಿಧಾನವ ಕಂಡಂತೆ
> ಎನ್ನ ಮರವೆಯ ತಮದ ಅದ್ರಿಗೆ ದಿನಮಣಿ ಜನಿಸಿದಂತೆ
> ಕಪಿಲಸಿದ್ದ ಮಲ್ಲಿಕಾರ್ಜುನಲಿಂಗವೆಂದು ಭ್ರಾಂತು ಸ್ವಯವಾಗಿತ್ತು
> ಪ್ರಭು ದೇವರ ಕಾರುಣ್ಯದಿಂದ"

ಎಂಬ ಸಿದ್ದರಾಮನ ಮಾತಿನಂತೆ ಈ ಎರಡು ಹಂತಗಳು ಸಿದ್ದರಾಮನ ಜ್ಞಾನ-ಕ್ರಿಯೆಗಳ ಸಂಗಮವಾಗಿ ಶರಣರ ಸಂಗದಲ್ಲಿ ವಿಚಾರಗಳ ಮಂಥನದಿಂದ ಸ್ವಯಂ ಅರಿವಿನಿಂದ ಸಾಧಕನಾಗಿ ಆಧ್ಯಾತ್ಮ ಜೀವನದ ಉತ್ತುಂಗ ಸ್ಥಿತಿಗೆ ಏರುತ್ತಾನೆ. ಸಾಧನೆ ಎಂದರೆ ಯಾವುದು ಎಂಬದನ್ನು ಈ ರೀತಿ ಹೇಳುತ್ತಾನೆ.

> "ಹುಟ್ಟಿದ ಕಲ್ಲು ದೇವಾಲಯವಾಯಿತು
> ಹುಟ್ಟಿದ ಪಶು ಹೊಲಕ್ಕೆ ಬಂದಿತು
> ಹುಟ್ಟಿದ ಮರ ಕಟ್ಟಳೆಯಾದವು
> ಹುಟ್ಟಿ ಕೀರ್ತಿಯ ಮೆಟ್ಟದವ ಇಟ್ಟ ಇಟ್ಟ ಹುಳಿಯನ್ನದಂತೆ ನೋಡಾ
> ಕಪಿಲಿಸಿದ್ದ ಮಲ್ಲಿಕಾರ್ಜುನಾ (೪೧೨) ಶ.ಸಾ.ವ

ಹೀಗೆ ಸಿದ್ದರಾಮ ಜಗತ್ತಿನ ಪ್ರತಿಯೊಂದು ವಸ್ತು ಉಪಯುಕ್ತವಾದದ್ದು ಅಂತಹದರಲ್ಲಿ ಮಾನವ ಜನ್ಮವೆತ್ತಿ ಮನುಷ್ಯ ಸಾಧಕನಾಗದಿದ್ದರೆ ಅವನ ಬಾಳು ವ್ಯರ್ಥ ಎಂದು ಹೇಳುತ್ತ ಮನುಷ್ಯನ ಪರಿಪೂರ್ಣ ವ್ಯಕ್ತಿತ್ವ ಹೊಂದುವ ಬಗೆಯನ್ನು ಅರಿತುಕೊಂಡು ಸಾಧನೆಯ ಪಥದಲ್ಲಿ ಸಾಧಕಾವಸ್ಥೆಯಲ್ಲಿ ಹಲವಾರು ಗುರುಗಳನ್ನು ಕಂಡಿದ್ದಾನೆ. ಅವರಿಂದ ಹಲವು ಅಂಶಗಳನ್ನು ತಿಳಿದುಕೊಂಡಿದ್ದಾನೆ.

> "ಎನ್ನ ತನು ಶುದ್ದವಾಯಿತು ಚೆನ್ನಬಸವಣ್ಣನಿಂದ
> ಎನ್ನ ಜೀವ ಶುದ್ಧವಾಯಿತು ಬಸವಣ್ಣನಿಂದ
> ಎನ್ನ ಭಾವ ಶುದ್ದವಾಯಿತು ಪ್ರಭುದೇವರಿಂದ
> ಇಂತೆನ್ನ ತನು-ಜೀವ-ಭಾವಗಳಲ್ಲಿ
> ಇಷ್ಟ ಪ್ರಾಣ ಭಾವಗಳ ಕುರುಹು ಕಂಡು
> ನಿಷ್ಠೆ ನಿಬ್ಬೆರಗಾದೆ ನಾನು ಕಪಿಲಸಿದ್ದ ಮಲ್ಲಿಕಾರ್ಜುನಯ್ಯಾ"

ಹೀಗೆ ಸಿದ್ದರಾಮ ಗುರುವಿನ ಸಂಗದಲ್ಲಿ ಜ್ಞಾನ ಪಡೆಯುತ್ತ ಅಂಗ-ಲಿಂಗ, ಸ್ಥಾವರ-ಜಂಗಮ, ಲೌಕಿಕ-ಪಾರಮಾರ್ಥಿಕ ವ್ಯತ್ಯಾಸ ತಿಳಿಯಲು ಚೆನ್ನಬಸವಣ್ಣ ಸಿದ್ದರಾಮನಿಗೆ ಲಿಂಗ ದಿಕ್ಷೆಯನ್ನು ನೀಡಿ ಷಟ್ ಸ್ಥಲ ಮಾರ್ಗತೋರಿದಾಗ ಮಾತ್ರ ಸಾದ್ಯವಾಯಿತು.

> "ನಿರ್ಮಲ ಜ್ಞಾನವೀವ ಗುರುಗಳು ಪ್ರಥಮರು
> ಸಂಶಯಾಳಿಗಳನ್ನೆಲ್ಲ ಜ್ಞಾನಾಗ್ನಿಯಿಂದ ದಹಿಸಿ
> ಮುಕ್ತಿಯ ಹಂಗೆಂಬುದ ಅರುಹಿನ ಬಂಧನದಲ್ಲಿರಿಸಿದ ಗುರು
> ಚೆನ್ನ ಬಸವಣ್ಣನಲ್ಲದೆ ಮರ್ತ್ಯೋರ್ವನ ಕಾಣೆ ನೋಡಾ
> ಕಪಿಲಸಿದ್ದ ಮಲ್ಲಿಕಾರ್ಜುನಾ.

["ಚೆನ್ನಬಸವಣ್ಣನ ದಿಕ್ಷೆಯ ಕೃಪೆಯಿಂದ ತನ್ನೊಳಗೆ ಲಿಂಗವ ಕಂಡು ಜಂಗಮ ಮುಖ ಲಿಂಗದೊಳಗೆ ತನ್ನ ಕಂಡು ತನ್ನೊಳಗೆ ಸಮಸ್ತ ವಿಸ್ತಾರ ಏನೆಲ್ಲವ ಕಂಡು ಜಂಗಮ ಮುಖ ಲಿಂಗವೆಂಬ ಬೇಧವನ್ನು ಅಂಗದೊಳಗೆ ಲಿಂಗವೇ ವಿಚಾರವಾಗಿ ಅಳವಟ್ಟ ವಿವರವನ್ನು ಲಿಂಗಾಂಗ ಸಂಬಂಧ ಸ್ಥಳ ಕುಳಂಗಳ ವಿವರವಾಗಿ ಇದ್ದಿತೆಂಬುದನು ಕಂಗಳ ನೋಟಕ್ಕೆ ಗುರಿಯಾದ ಲಿಂಗವೆ ಅಂಗವನೊಳಕೊಂಬ ಬೇಧವನು ತಿಳಿಯಲು ಸಾಧ್ಯವಾಯಿತು" (ಶರಣ ಸಿದ್ದರಾಮೇಶ್ವರ ವಚನಗಳು ಪುಟ-೩೪ ಪ್ರಸ್ತಾವನೆ ಡಾ. ಎಸ್.ವಿದ್ಯಾಶಂಕರ)]

ಹೀಗೆ ಶರಣರ ಸಂಗ, ಅಂಗಕ್ಕೆ ಲಿಂಗೋಪದೇಶ, ಮನಕ್ಕೆ ಮಂತ್ರೋಪದೇಶವನ್ನು ಮೇಲೆ ಸಿದ್ದರಾಮನ ವಿಚಾರಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡು ಬಂದವು. ತಾವು ಮೊದಲು ಸ್ಥಾವರಕ್ಕೆ ಮಹತ್ವನೀಡಿ ದೇವಾಲಯ ನಿರ್ಮಾಣ ಕೆರೆ ಬಾವಿಗಳನ್ನು ನಿರ್ಮಾಣ ಮಾಡಿದ ಕಾರ್ಯಕ್ಕಿಂತ ಜಂಗವು ಜ್ಞಾನವು ಸಂಕೇತವಾಗಿ ಒಂದೇ ಕಡೇ ನಿಲ್ಲದೇ ವಿಚಾರಗಳಲ್ಲಿ ಬದಲಾವಣೆ ತಂದು ಕೊಂಡದ್ದು ಮಹತ್ವದ್ದಾಗಿದೆ "ಕರುಡು ನಂಬಿಕೆ ಮನೋದಾಸ್ಯ ಇವನು ತ್ಯಜಿಸಿದಾಗ ವಿಚಾರ ಸಾಹಿತ್ಯ ಹುಟ್ಟುತ್ತದೆ. ಯಾವುದೇ ಸಾಹಿತ್ಯದಲ್ಲಿ ನಿಷ್ಪಪಟತನ ಸೂಕ್ಷ್ಮ ವಿಷಯಗಳನ್ನು ತಿದ್ದಿಕೊಳ್ಳುವ ಕಾತರ ಆತ್ಮ ವಿಶ್ವಾಸ ವಿಮರ್ಶಾತ್ಮಕ ಬುದ್ದಿ ಆಶಾವಾದಿಯಾಗಿರುವುದು ತರ್ಕಜ್ಞಾನಕ್ಕೆ ಬದ್ಧನಾಗಿರುವುದು ರುಜುವಾತು ಸಾಕ್ಷಿಗಳಿಂದ ಮಾತ್ರ ನಂಬುವುದು ಸಲಹೆಗೆ ಅವಕಾಶವಿಲ್ಲದಿರುವ ಮನೋಭಾವ ತೀರ್ಮಾನಗಳನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವ ಬುದ್ಧಿ ಮುಂತಾದ ನಡುವಳಿಕೆಗಳು ಕಂಡು ಬಂದರೆ ಅಂತಹ ಸಾಹಿತ್ಯ ವೈಚಾರಿಕ ಮನೋಭಾವನೆಗಳನ್ನು ಹೊಂದಿದೆ ಎಂದು ಹೇಳಬಹದು" (ಶರಣ ಸಾಹಿತ್ಯ ಅರಿವಿನ ಗಣಿ-ಮಣ್ಣೂರುಗುರಪ್ಪ ಪುಟ-೩೬)

ಸಿದ್ದರಾಮನಲ್ಲಿ ಇಂತಹ ಹಲವಾರು ಪ್ರಗತಿಪರ ವಿಚಾರಗಳು ಕಂಡುಬಂದಿವೆ. ಸಿದ್ದರಾಮ ಕೇವಲ ಇಷ್ಟಲಿಂಗ ದಾರಣೆಯಿಂದ ಅವನ ವಿಚಾರದಲ್ಲಿ ಬದಲಾವಣೆ ಬರಲಿಲ್ಲ ಶರಣರ ಸಂಪರ್ಕ ದೊರೆತ ಮೇಲೆ ಅವನ ವಿಚಾರಗಳಲ್ಲಿ ಸಂಪೂರ್ಣ ಬದಲಾವಣೆ ಬಂದಿತು. ಇದಕ್ಕೂ ಮೊದಲು ಪಾರಂಪರಿಕವಾಗಿ ಬಂದ ವಿಚಾರಗಳೆಲ್ಲ ಬದಲಾದವು ಮೊದಲಿನ ಪಾಪ-ಪುಣ್ಯ, ಸ್ವರ್ಗ-ನರಕಗಳ ಕುರಿತಾದ ತಪಸ್ಸು ಮಾಡಿ ಲೋಕೋಪಕಾರ ಮಾಡಿ ಸ್ವರ್ಗ ಪಡೆಯಬಹುದೆಂಬ ನಿಲುವು ಬದಲಾಗಿ ಮಾನಸಿಕ ಕಾರ್ಯವೇ ಪಾಪ-ಪುಣ್ಯ ಎಂಬ ವಾಸ್ತವ ಜಗತ್ತಿನೆಡೆಗೆ ತನ್ನ ವಿಚಾರ ಲಹರಿಯನ್ನು ಹರಿಸುತ್ತಾನೆ. ಪಾಪ-ಪುಣ್ಯದ ನಿಜಸ್ವರೂಪ ಅರಿಯುತ್ತಾನೆ.

> "ಕೆರೆ ಕಟ್ಟಿಸುವವನೆ ಕರ್ಮಿ?
> ಆಗ್ರವನೆತ್ತಿಸುವವನೆ ಪಾತಕಿ
> ಶಿವಾಲಯವ ಕಟ್ಟಿಸುವವನೆ ದ್ರೋಹಿ
> ಗುರು ಹಿರಿಯರ ಕಂಡರೆ ನಮಿಸದಾತನೆ ಚಂಡಾಲ
> ಸತ್ಕ್ರೀಯೆಯಿಂದ ಶಿವಾರ್ಚನೆಯ ಮಾಡುವಾತನೆ

ಅನಾಚಾರಿ
ಇಂತಿ ಐವರನೊಳಗೊಂಬನೆ
ನಮ್ಮ ಕಪಿಲಸಿದ್ದಮಲ್ಲಿಕಾರ್ಜುನಾ

ಎಂದು ಸ್ಥಾವರ ಲೌಕಿಕ ಕೈಯೆಗಿಂತ ಜಂಗಮು, ಮತ್ತು ಅಲೌಕಿಕ ಕೈಯೆ ವಿಚಾರ ಮಹತ್ವದ್ದು ಎಂಬ ನಿಲುವು ತಾಳುತ್ತಾನೆ. ತಾನು ಮಾಡಿದ ಕೆರೆ ಬಾವಿ ಕಟ್ಟಿಸುವ ಲೌಕಿಕ ಕಾರ್ಯಕ್ಕಿಂತ ಪರಮಾರ್ಥ ಜ್ಞಾನ ಶ್ರೇಷ್ಠ ಎಂದು ಅರಿಯುತ್ತಾನೆ ಹೀಗೆ ಸಿದ್ದ ರಾಮನ ಜೀವನದ ಮೊದಲಿನ ಆಧ್ಯಾತ್ಮಿಕ ಕಲ್ಪನೆ ಮತ್ತು ನಂತರದ ಆಧ್ಯಾತ್ಮಿಕ ಪರಿಕಲ್ಪನೆಯಲ್ಲಿ ಬದಲಾವಣೆ ಕಂಡು ಬರುತ್ತವೆ. ಶರಣರ ಸಂಗದಿಂದ ಪರವಿಚಾರ ಆಚಾರಗಳನ್ನು ಮುಕ್ತವಾಗಿ ಹೊಗಳುವ (ಒಪ್ಪುವ) ತನ್ನ ಜ್ಞಾನ ಕೈಯಾದಿಗಳನ್ನು ಇತರರೊಂದಿಗೆ ಹೋಲಿಸಿ ಒಳ್ಳೆಯದನ್ನು ಗೌರವಿಸುವ ವಿಚಾರ ಈ ಕೆಳಗಿನ ವಚನದಿಂದ ತಿಳಿದು ಬರುತ್ತದೆ.

"ಜ್ಞಾನ ಕ್ರಿಯಾದಿಗಳಿಂದ ಲಿಂಗದಲ್ಲಿ ನಿಬ್ಬೆರಗಾದ ನಿಲಮ್ಮನ
ಪಾದದ ಕಂದ ನಾನು ಪಾದದ ದಾಸ ನಾನು
ಪಾದದ ಪಾದುಕೆ ನಾನು ಪಾದುಕೆಯ ಧೂಳಿ ನಾನು
ಕಪಿಲಸಿದ್ದ ಮಲ್ಲಿಕಾರ್ಜುನಾ."

ಶರಣರ ಸಂಗದ ನಂತರ ತನ್ನ ಪೂರ್ವದ ಮನೋಸ್ಥಿತಿ – ವಿಚಾರಗಳನ್ನು ಕಂಡು ಮರಗುತ್ತಾನೆ ಅದರಿಂದ ಹೊರಬರಲು ಇರುವ ಮಾರ್ಗವನ್ನು ಅರಸುತ್ತ ಈ ರೀತಿ ದೃಷ್ಟಾಂತ ರೂಪದಲ್ಲಿ ತಿಳಿಸುತ್ತಾನೆ.

"ಒಬ್ಬರಸು ಮೋಹಿತನಾಗಿ, ಅಂದೇ ಲಗ್ನವಾಗಿ,
ಅಂದೇ ರತಿಯಾಗಿ ಅಂದೇ ಪತಿ ಮೃತಿಯಾದ
ದರಿದ್ರನಾರಿಯ ತೆರನಾಯಿತ್ತೆನ್ನ ಮನ
ಒಬ್ಬರಸು ಭೂಪದಕ್ಷಿಣೆ ಮಾಡಿ
ಭೂ ದೇವಿಯ ಮಗನ ಜನನ ವಾರ್ತೆಯನಂದೇ ಕೇಳಿ
ಅಂದೇ ಮಗನ ಮೃತಯಾದರೆಸಿನ ಮನವಾದ ತೆರನಾಯಿತ್ತೆನ್ನಮನ
ತನ್ನ ಕೊಟ್ಟು ತಾ ಹೋದಡೆ ಗುರುಸ್ಥಲ ಹೋಯಿತ್ತು
ಲಿಂಗಸ್ಥಲ ಹೋಯಿತ್ತು ಹಂಗಮಸ್ಥ ಮೊದಲೇ ಹೋಯಿತ್ತು
ಇನ್ನಾರ ಪಾದವಿಡಿದವೆ? ಕಪಿಲಸಿದ್ದ ಮಲ್ಲಿಕಾರ್ಜುನ
ಚೆನ್ನ ಬಸವ ಮಹಾಪ್ರಭುವೇ"

ಹೀಗೆ ಸಿದ್ದರಾಮ ಚನ್ನಬಸವಣ್ಣ ತನಗೆ ಘಟಸ್ಥಲ ದಿಕ್ಷೆ, ನೀಡದೆ ಹೋಗಿದ್ದರೆ ತಾನು ಏನಾಗುತ್ತಿದ್ದೆ ಚನ್ನಬಸವಣ್ಣನ ಕೃಪೆಯಿಂದ ತಾನು ಗುರು–ಲಿಂಗ–ಜಂಗಮದ ಮಹಿಮೆಯನ್ನು ಅರಿತುಕೊಂಡು ಕರ್ಮ ಯೋಗದಿಂದ ಹೊರಬಂದು ಜ್ಞಾನಯೋಗದ ಕಡೆ ಸಾಗಲು ಸಾಧ್ಯವಾಯಿತು ಎಂದು ಚನ್ನಬಸವಣ್ಣನಿಗೆ ತಾನು ಚಿರಋಣಿಯಾದದನ್ನು ಈ ಮೂಲಕ ಸ್ಮರಿಸಿಕೊಂಡಿದ್ದಾನೆ.

"ಕೆರೆಯ ಅಗಳುವ ಅಣ್ಣಂಗಳೆಲ್ಲ
ಮೂಲೋಕದೊರೆಯನ ಪಾದದಲ್ಲಿ ಬಿದ್ದು ಹೊರಳಾಡುತ್ತಾರೆ ನೋಡಾ
ದೊರೆಯಮುರಾರಿಯನರಿದು ತ್ರಿಪುರಾರಿ ತಾವಾಗರು ನೋಡಾ
ಕಪಿಲಸಿದ್ದ ಮಲ್ಲಿಕಾರ್ಜುನ ಯೋಗಿನಾಥಾ (೧೪೫೫) ಶ.ಸಿ.ವ)

ನಿಜವಾದ ದೊರೆ ಮೂಲೋಕದೊಡೆಯ ಕಪಿಲ ಸಿದ್ದ ಮಲ್ಲಿಕಾರ್ಜುನನ ಮೆಚ್ಚಿಸಲು ಕೆರೆ ಬಾವಿಗಳನ್ನು ತೊಡುವುದಕ್ಕಿಂತ ಹೃದಯ ಶುದ್ದಿ ಅನುಭಾವ ಎಂಬುದು ಅನುಭಾವಿಕನ ಆಚಾರದಲ್ಲಿದೆ ಹೊರತು ಹೊತ್ತಿಗೆಯಲ್ಲಿಲ್ಲ. ಲೋಕಾರ್ಥ ಕಾರ್ಯಗಳಲ್ಲಿಲ್ಲ ಎಂಬ ಧೋರಣೆಯನ್ನು ಸಿದ್ದರಾಮನ ಬದಲಾವಣೆ ಗೊಂಡಿದ್ದು ಕಾಣುತ್ತವೆ.

" ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ ಕೆಳಿರಯ್ಯಾ
ಕೈಲಾಸವೆಂಬುದು ಭೋಮಿಯೋಳಗಿರುವ ಹಾಳು ಬೆಟ್ಟ
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು
ಅಲ್ಲಿರುವ ಚಂದ್ರಶೇಖರನು ಬಹುಎಡ್ಡ
ಇದರಾಡಂಬರವೇಕಯ್ಯಾ?
ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ
ಲಿಂಗಾಗ ಸಾಮರಸ್ಯವ ತಿಳಿದು
ನಿಮ್ಮ ಪಾದ ಪದ್ಮದೋಳು ಬಯಲಾದ ಪದವೇ ಕೈಲಾಸವಯ್ಯಾ
ಕಪಿಲಸಿದ್ದ ಮಲ್ಲಿಕಾರ್ಜುನಾ(೩೧೫.) ಶ.ಸಿ.ವ)

ಕೈಲಾಸವೆಂದರೆ ಯಾವುದು ಭೂಲೋಕದಲ್ಲಿದ್ದು ಕೈಲಾಸದಲ್ಲಿ ಸ್ಥಾನ ಪಡೆಯಲು ಹಪಹಪಿಸುವ ಜನರನ್ನು ನಿಂದುಸುತ್ತ ಅಲ್ಲಿ ನೆಲೆಸಿರುವ ಶಿವನನ್ನು ಎಡ್ಡನೆಂದು ಹಳಿಯುವ ಮಟ್ಟದಲ್ಲಿ ವಿಚಾರ ಮತಿಯಾಗಿ ಸಿದ್ದರಾಮ ಭೋಲೋಕದಲ್ಲಿ ಆಚರಣಾಧಿಗಳನ್ನು ಹಳಿಯುತ್ತಾನೆ ಜ್ಞಾನಯೋಗಕ್ಕೆ ಹೆಚ್ಚಿನ ಮಹತ್ವ ನೀಡುತ್ತಾನೆ.

"ಕಟ್ಟಿದ ಲಿಂಗವ ಬಿಟ್ಟು ನಟ್ಟಿದ ಲಿಂಗವನಟ್ಟಿ
ಮೂಟೆ ಮೂಟೆ ತಾವರೆ ಮೊದಲಾದ ಪುಷ್ಪವ ಧರಿಸುವಾತನಿರವು
ಚಾಂಡಾಲನ ಇರವು ನೋಡಾ
ಆತನ ಸಂಗ ಮಾದಿಗರ ಸಂಗ ನೋಡಾ

ಸಿದ್ದರಾಮ ಜ್ಞಾನಯೋಗದಿಂದ ಜಂಗಮಲಿಂಗ ಸ್ಥಾವರ ಲಿಂಗಗಳ ವ್ಯತ್ಯಾಸವನ್ನು ತಿಳಿದು ಜಂಗಮಲಿಂಗ ಸ್ಥಾವರಲಿಂಗಕ್ಕಿಂತ ಶ್ರೇಷ್ಠವಾದದ್ದು ಎಂಬ ನಿಲುವನ್ನು ತಾಳುತ್ತಾನೆ. ಸ್ಥಾವರಲಿಂಗ ಸ್ಥಾಪಕನಾಗಿದ್ದ ಸಿದ್ದರಾಮ ಹೀಗೆ ಕಟುವಾಗಿ ಟೀಕಿಸಲು ಶರಣರ ಪ್ರಭಾವ ಇದಕ್ಕೆ ಕಾರಣವೆಂದು ಹೇಳಬಹುದು.
ಸಮಾಜ ಮುಖಿಯಾಗಿ ಬೆಳೆದ ಸಿದ್ದರಾಮ ಸಮಾಜದಲ್ಲಿನ ಜಾತಿ–ಕುಲ ವ್ಯವಸ್ಥೆಯನ್ನು ಕಂಡು ತೀವ್ರ ವಿರೋಧ ವ್ಯಕ್ತಪಡಿಸುತ್ತಾನೆ. ಅಂತಹ ವ್ಯವಸ್ಥೆಯ ಬಗ್ಗೆ ಹೀಗೆ ನುಡಿಯುತ್ತಾನೆ.

"ಕುಲವೆಂಬುದು ಹೋರಾಡುವ ಅಣ್ಣಗಳಿರಾ ಕೇಳಿರೋ
ಕುಲವೇ ಡೋಹರನ?ಕುಲವೆ ಮಾದರನ ? ಕುಲವೇ ದುರ್ವಾಸನ
ಕುಲವೇ ವ್ಯಾಸನ? ಕುಲವೇ ವಾಲ್ಮಿಕನ ?ಕುಲವೇ ಕೌಂಡಿಲ್ಯನ

ಕುಲವ ನೋಳ್ಪಡೆ ಹುರುಳಿಲ್ಲ?
ಅವರ ನಡೆಯ ನೊಳ್ಪಡೆ ನಡೆಯುವವರು
ತ್ರಿಲೋಕದಲ್ಲಿಲ್ಲ ನೋಡಾ!
ಕಪಿಲಸಿದ್ದ ಮಲ್ಲಿಕಾರ್ಜುನಾ.

ಹೀಗೇ ಜಾತಿ ವ್ಯಕ್ತಿಯ ಹುಟ್ಟಿನಿಂದ ಬರುವಂತದ್ದಲ್ಲ ಅವರ ನಡೆ–ನುಡಿ ಆಚಾರ–ವಿಚಾರದಿಂದ ವ್ಯಕ್ತಿಯ ಕುಲವನ್ನು ನಿರ್ಧರಿಸಬೇಕೆಂದು ಜಾತಿ ರಹಿತ ಸಮಾಜ ನಿರ್ಮಾಣದ ಕನಸು ಕಂಡು ಅದನ್ನು ಸಾಕಾರಗೋಳಿಸಲು ಪ್ರಯತ್ನಿಸಿದ ಶರಣರ ಸಾಲಿನಲ್ಲಿ ಸಿದ್ದರಾಮನು ಸ್ಥಾನ ಪಡೆಯುತ್ತಾನೆ ಮಾನವ ಕುಲದಲ್ಲಿ ಗಂಡು–ಹೆಣ್ಣೆಂಬ ಎರಡೇ ಜಾತಿ ಎಂದು ಹೇಳಿದರೂ ಶರಣರ ದೃಪಷ್ಟಿಯಲ್ಲಿ ಗಂಡು ಹೆಣ್ಣೆಂಬ ಭೇಧವನ್ನು ತೋರೆದು ಭಕ್ತ–ಭುವಿ ಎಂಬ ವರ್ಗವನ್ನು ಮಾತ್ರ ಕಲ್ಪಿಸಿ ಜಾತಿ–ಲಿಂಗ ತಾರತಮ್ಯದ ನಡುವೆ ಸಾಮರಸ್ಯ ಸಾಧಿಸುವ ಪ್ರಗತಿಪರ ವಿಚಾರವನ್ನು ಸಿದ್ದರಾಮ ತೆಳೆದಿದ್ದಾನೆ.

ಹೀಗೆ ಕರ್ಮ ಯೋಗದಿಂದ ಜ್ಞಾನಯೋಗದೆಡೆಗೆ ಸಾಗಿದ ಸಿದ್ದರಾಮನ ಕುರಿತು ಹರಿಹರ ರಚಿಸಿದ ರಗಳೆ, ರಾಘವಾಂಕನ "ಸಿದ್ದರಾಮ ಚರಿತೆ' ಪುರಾಣದಿಂದ ಹಲವು ವಿಚಾರಗಳು ತಿಳಿದುಬಂದಿವೆ. ಅಲ್ಲದೆ ಸಿದ್ದರಾಮನ ಹಲವು ವಚನಗಳಲ್ಲಿ ತನ್ನ ಚರಿತ್ರೆಯನ್ನು ಹೇಳುವ ವಚನಗಳಿಂದ ತಿಳಿಯಬಹುದು. ವಚನ ಸಾಹಿತ್ಯ ವಾರಿಧಿಗೆ ಸಿದ್ದರಾಮ ೬೮ ಸಾವಿರ ವಚನಗಳನ್ನು ನೀಡಿದ್ದಾಗಿ ತಿಳಿಸಿದ್ದಾನೆ.

"ಆರವತ್ತೆರಡು ಸಾವಿರ ವಚನಗಳ ಹಾಡಿ ಹಾಡಿ
ಸೋತಿತೆನ್ನ ಮನ ನೋಡಯ್ಯಾ
ಹಾಡುವುದೋಂದೆ ವಚನ ನೋಡುವುದೋಂದೆ ವಚನ
ವಿಷಯ ಬಿಟ್ಟು ನಿರ್ವಿಷಯ ನಾಗುವುದೊಂದೆ ವಚನ
ಕಪಿಲಸಿದ್ದ ಮಲ್ಲೆಶನಲ್ಲಿ"(೫೮ ಶ.ಸಿ.ವ)

ಸಿದ್ದರಾಮನಿಗೆ ವಚನವು ಅಭಿವ್ಯಕ್ತಿ ಮಾಧ್ಯಮವಾಗಿಲ್ಲ ಅದು ಕಪಿಲಸಿದ್ದ ಮಲ್ಲಿಕಾರ್ಜುನನ್ನು ಅರಿಯುವ ಸಾಧನವಾಗಿದೆ " ಕರ್ಮಯೋಗದಿಂದ ಶೀವಯೋಗದ ಕಡೆಗೆ ಕ್ರಿಯೆಯಿಂದ ಜ್ಞಾನದೆಡೆಗೆ ಸಿದ್ದರಾಮ ಒಬ್ಬ ಸಾಧಕನಾಗಿ ತನ್ನ ಬದುಕನ್ನು ಗುರುತಿಸಿಕೊಂಡಿದ್ದಾನೆ. ಒಂದು ಹಂತದಿಂದ ಮತ್ತೊಂದು ಹಂತದವರೆಗೆ ನಡೆದು ಅವೆರಡೂ ಅನುಭವಗಳನ್ನು ಅರಗಿಸಿಕೊಂಡು ಬೆಳೆದಿರುವದರಿಂದ ಸಿದ್ದರಾಮ ನಮಗೆ ಅತ್ಯಂತ ಮುಖ್ಯನಾಗುತ್ತಾನೆ" (ಕಾಯಕಯೋಗಿ ಸೋನ್ನಲಿಗೆಯ ಸಿದ್ದರಾಮ –ಪುಟ–೪ ಬೆಳ್ಳಿಕಿರಣ –೨ ಡಾ.ಜಿ. ಎಸ್ ಉಪಾದ್ಯೆ)

**ಆಕರ ಗ್ರಂಥಗಳು**


1. ಸೋನ್ನಲಿಗೆ ಸಿದ್ದರಾಮ – ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ ಬಿಜಾಪೂರ
2. ಕಾಯಕ ಯೋಗಿ ಸೋನ್ನಲಿಗೆ ಸಿದ್ದರಾಮ – ಡಾ.ಜಿ ಎಸ್ ಉಪಾದ್ಯೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
3. ಸೊನ್ನಲಾಪುರದ ಸಂತ ಸಿದ್ದರಾಮನ –ಡಾ.ಎಲ್ ಬಸವರಾಜು, ಸಾರಾ ಎಂಟರ್ ಪ್ರೈಸಿಸ್ ನಿಜ ವಚನಗಳು, ಮೈಸೂರು.
4. ಶರಣ ಸಿದ್ದರಾಮನ ವಚನಗಳು– ಸಂಪಾದಕರು ಡಾ.ಎಸ್ ವಿದ್ಯಾಶಂಕರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
5. ಶರಣ ಸಾಹಿತ್ಯ ಅರಿವಿನ ಗಣಿ – ಮಣ್ಣೂರ ಗುರಪ್ಪ ಬಸವರಾಜ ಪ್ರಕಾಶನ ಮೈಸೂರು
6. ಕೂಡು ಚಿಕ್ಕಲಿಂಗರು ಒಂದು ಕೈಪಿಡಿ –ಪ್ರೋ ಸಿದ್ದಣ್ಣ ಉತ್ನಾಳ ಅನುಪಮ ಪ್ರಕಾಶನ ಅಥಣ